**<u>ದಿನಾಂಕಃ 04-02-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>**

ದಿಃ28-11-2016 ರಂದು ನಾನು, ಕುಮಾರಸ್ವಾಮಿ, ಅಣ್ಣಪ್ಪ, ಶಂಕರೇಗೌಡ, ಇನ್ನೊಬ್ಬ ಕುಮಾರ, ಮತ್ತು ರಾಜಯ್ಯ ಇಬ್ಬಾಣೆ ಗ್ರಾಮದ ಸೈಟ್ ನಂಃ57 ರ ಬಳಿ ಬೆಳಿಗ್ಗೆ 8-00 ಗಂಟೆಗೆ ಹೋದೆವು. ನಾವೆಲ್ಲರೂ ಆ ಸ್ಥಳಕ್ಕೆ ಶೆಡ್ಡನ್ನು ಕೀಳಿಸುವ ಸಲುವಾಗಿ ಹೋಗಿದ್ದೆವು. ಆ ಸಮಯ ನಾವೆಲ್ಲರೂ ಶೆಡ್ಡನ್ನು ಕೀಳುತ್ತಿದ್ದೆವು. ಆ ಸಮಯ ಆರೋಪಿ 1 ರಿಂದ 5 ರವರು ಅವರ ಮನೆಯಲ್ಲಿ ಇದ್ದರು. ನಾವು ಶೆಡ್ ಕೀಳುತ್ತಿದ್ದಾಗ ಎಲ್ಲಾ ಆರೋಪಿಗಳೂ ಆ ಸ್ಥಳಕ್ಕೆ ಬಂದರು. 1 ರಿಂದ 4 ನೇ ಆರೋಪಿಗಳು ತಮ್ಮ ಜೊತೆ ದೊಣ್ಣೆಗಳನ್ನು ತಂದಿದ್ದರು. 5 ನೇ ಆರೋಪಿ ಯಾವುದೇ ಶಸ್ತ್ರಾಸ್ತಗಳನ್ನು ತಂದಿರಲಿಲ್ಲ. 1 ರಿಂದ 4 ನೇ ಆರೋಪಿಗಳು ನಮ್ಮನ್ನೆಲ್ಲರನ್ನೂ ಉದ್ದೇಶಿಸಿ "ಬೋಳಿಮಕ್ಕಳಾ, ದುಡ್ಡು ಕೊಟ್ಟು ಪ್ರಭಯ್ಯನಿಂದ ಸೈಟ್ ತೆಗೆದುಕೊಂಡಿದ್ದೇವೆ, ಸೈಟ್ ಗೆ ಕಾಲು ಹಾಕಿದರೆ ಕೊಲೆ ಮಾಡುತ್ತೇವೆ" ಎಂದು ಬಾಯಿಗೆ ಬಂದಂತೆ ಬೈಯ್ಯಲು ಪ್ರಾರಂಭಿಸಿದರು. ಆರೋಪಿ ವಿಶಾಲಾಕ್ಷಿ 1 ರಿಂದ 4 ನೇ ಆರೋಪಿಗಳಿಗೆ "ಈ ನನ್ನ ಮಕ್ಕಳು ಯಾವಾಗಲೂ ಬರುತ್ತಿರುತ್ತಾರೆ, ಅವರನ್ನು ಮುಗಿಸಿಹಾಕಿ" ಎಂದು ಕೂಗಾಡುತ್ತಿದ್ದರು. ಆರೋಪಿ ಮಲ್ಲಿಕಾರ್ಜುನ ತನ್ನ ಬಳಿ ಇದ್ದ ದೊಣ್ಣೆಯಿಂದ ನನ್ನ ಅಣ್ಣ ಕುಮಾರಸ್ವಾಮಿಯ ಎಡಭಾಗದ ತಲೆಗೆ ಕೊಲೆ ಮಾಡಿಬಿಡುತ್ತೇನೆ ಎಂದು ಆ ದೊಣ್ಣೆಯಿಂದ ಬಲವಾಗಿ ತಲೆಯ ಎಡಭಾಗಕ್ಕೆ ಹೊಡೆದು ರಕ್ತಗಾಯಗೊಳಿಸಿದ. 2 ನೇ ಆರೋಪಿ ಪರಮೇಶ ಕುಮಾರಸ್ವಾಮಿಯನ್ನು ಬಿಡುವುದು ಬೇಡ ಕೊಲೆ ಮಾಡಿಬಿಡೋಣ ಎಂದು ಕೂಗಾಡುತ್ತಾ, ದೊಣ್ಣೆಯಿಂದ ಕುಮಾರಸ್ವಾಮಿಯ ಬಲಭಾಗದ ಬೆನ್ನಿಗೆ, ಎಡಭಾಗದ ಕಾಲು, ಹಿಂಗಾಲು ಮತ್ತು ಮುಂಗಾಲಿಗೆ ಹಲ್ಲೆ ಮಾಡಿದ್ದಾನೆ. ಆ ರೀತಿ 1 ಮತ್ತು 2 ನೇ ಆರೋಪಿಗಳು ತೀವ್ರವಾಗಿ ಹಲ್ಲೆ ಮಾಡಿದ ಕಾರಣ , ಕುಮಾರಸ್ವಾಮಿ

ಗಾಯಗೊಂಡು ಪ್ರಜ್ಞೆ ತಪ್ಪಿ ಕುಸಿದು ಬಿದ್ದರು. ಅಲ್ಲೇ ಇದ್ದ ನಾನು ಕುಮಾರಸ್ವಾಮಿಯನ್ನು ಆರೋಪಿಗಳಿಂದ ಬಿಡಿಸಲು ಹೋದೆ. ಆಗ 3 ನೇ ಆರೋಪಿ ರವಿ "ಈ ನನ್ನ ಮಗನನ್ನು ಕೂಡ ಮುಗಿಸಿಬಿಡೋಣ" ಎಂದು ಕೂಗಾಡುತ್ತಾ ನನ್ನ ತಲೆಯ ಎಡಭಾಗಕ್ಕೆ ಆತನ ಬಳಿ ಇದ್ದ ದೊಣ್ಣೆಯಿಂದ ಹಲ್ಲೆ ಮಾಡಿದ ಮತ್ತು ರಕ್ತಗಾಯಪಡಿಸಿದ. ಅಲ್ಲೇ ಇದ್ದ 4 ನೇ ಆರೋಪಿ ಓಂಕಾರ, ಆಗಾಗ ಇವನು ಬರುತ್ತಿರುತ್ತಾನೆ ಎಂದು ಕೊಲೆ ಮಾಡಿಬಿಡೋಣ ಎಂದು ತನ್ನ ಬಳಿ ಇದ್ದ ದೊಣ್ಣೆಯಿಂದ ನನ್ನ ಮೈಕೈಗೆಲ್ಲಾ ಹೊಡೆದು ಹಲ್ಲೆ ಮಾಡಿದ್ದಾನೆ. 5 ನೇ ಆರೋಪಿ ವಿಶಾಲಾಕ್ಷಿ ನನ್ನ ಕೊರಳಪಟ್ಟಿಯನ್ನು ಹಿಡಿದುಕೊಂಡು, "ಈ ನನ್ನ ಮಗನನ್ನು ಮುಗಿಸಿಬಿಡಿ ಆಗಾಗ ಬರುತ್ತಿರುತ್ತಾನೆ" ಎಂದು ಕೂಗಾಡುತ್ತಾ, ನನ್ನ ಎರಡೂ ಕೆನ್ನೆಗಳಿಗೆ ಕೈಯಿಂದ ಹಲ್ಲೆ ಮಾಡಿದ್ದಾಳೆ. ಆಗ ಅಲ್ಲಿದ್ದ ಚಾಸಾ–3 ರಿಂದ 6 ಜಗಳವನ್ನು ಬಿಡಿಸಲು ಬಂದರು. ಆಗ 1 ರಿಂದ 4 ನೇ ಆರೋಪಿಗಳು ತಮ್ಮ ಬಳಿ ಇದ್ದ ದೊಣ್ಣೆಯನ್ನು ಬಿಸಾಡಿ ಓಡಿಹೋದರು. ತೀವ್ರವಾಗಿ ಗಾಯಗೊಂಡು ಪ್ರಜ್ಞೆ ತಪ್ಪಿ ಬಿದ್ದಿದ್ದ ನನ್ನ ಅಣ್ಣ ಕುಮಾರಸ್ವಾಮಿಯನ್ನು ಮತ್ತು ಗಾಯಗೊಂಡಿದ್ದ ನನ್ನನ್ನು ಅಣ್ಣಪ್ಪ, ಕುಮಾರ, ಹಾಗೂ ಶಂಕರ ಎಲ್ಲರೂ ಸೇರಿ ಯಾವುದೋ ಒಂದು ವಾಹನದಲ್ಲಿ ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದರು. ಆರೋಪಿಗಳು ನಮ್ಮ ಜೊತೆ ಸುಮಾರು ಅರ್ಧ ಗಂಟೆ ಕಾಲ ಜಗಳವಾಡಿದ್ದಾರೆ.

ನಾವು ಆಸ್ಪತ್ರೆಗೆ ಬಂದಾಗ ಬೆಳಿಗ್ಗೆ ಅಂದಾಜು 9 ಗಂಟೆ ಅಗಿತ್ತು. ಅಲ್ಲಿಗೆ ನಮ್ಮ ಗ್ರಾಮದವರಾದ ಕುಮಾರಸ್ವಾಮಿರವರ ಹೆಂಡತಿ ವನಜಾಕ್ಷಿ ಮತ್ತು ನಟರಾಜ ಬಂದರು. ಕುಮಾರ ಚಾಸಾ–3 ರವರು ಅವರಿಬ್ಬರಿಗೆ ಫೋನ್ ಮಾಡಿ, ಈ ರೀತಿ ಆಗಿದೆ, ಆಸ್ಪತ್ರೆಗೆ ಬನ್ನಿ ಎಂದು ತಿಳಿಸಿದ್ದ ಕಾರಣ ಅವರು ಆಸ್ಪತ್ರೆಗೆ ಬಂದರು. ವನಜಾಕ್ಷಿ ಮತ್ತು ನಟರಾಜ ಗಲಾಟೆ ಸಮಯದಲ್ಲಿ ಇರಲಿಲ್ಲ,ಕಾಟಿಹಳ್ಳಿ ಗ್ರಾಮದಲ್ಲಿದ್ದರು. ಆಸ್ಪತ್ರೆಯಲ್ಲಿ ನನಗೆ ಮತ್ತು ನನ್ನ ಅಣ್ಣ ಕುಮಾರಸ್ವಾಮಿಗೆ ವೈದ್ಯರು ಚಿಕಿತ್ಸೆ ನೀಡಿದ್ದಾರೆ. ವಿಷಯ ತಿಳಿದ ಹಾಸನದ ಗ್ರಾಮಾಂತರ ಪೊಲೀಸರು ಆಸ್ಪತ್ರೆಗೆ

ಬಂದರು. ಪೊಲೀಸರು ಬಂದು ಘಟನೆಯ ಬಗ್ಗೆ ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಪಡೆದುಕೊಂಡರು. ಆ ರೀತಿ ನೀಡಿದ ಹೇಳಿಕೆಯನ್ನು ನೋಡುತ್ತಿದ್ದೇನೆ. ನಾನು ಪೊಲೀಸರಿಗೆ ಘಟನೆಯ ಸಂಪೂರ್ಣ ವಿವರವನ್ನು ನೀಡಿದ್ದು, ಅದನ್ನು ನೋಡುತ್ತಿದ್ದು ಅದನ್ನು ನಿಪಿ–1 ಎಂದು ಸಾಕ್ಷಿ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ನಾನು ನೀಡಿದ ಹೇಳಿಕೆಯನ್ನು ಪೊಲೀಸರು ದಾಖಲಿಸಿಕೊಂಡು, ಆ ರೀತಿ ದಾಖಲಿಸಿಕೊಂಡ ಮೇಲೆ ಓದಿ ಹೇಳಿದ್ದಾರೆ. ನಾನು ತಿಳಿದುಕೊಂಡಿದ್ದೇನೆ ಹಾಗೂ ನಿಪಿ–1 ರಲ್ಲಿ ಬರೆದಿರುವ ಸಂಗತಿಗಳು ಸರಿ ಇವೆ.

ಹಾಸನದ ಆಸ್ಪತ್ರೆಯಲ್ಲಿ ವೈದ್ಯರು ಇಲ್ಲಿ ಆಗುವುದಿಲ್ಲ ಎಂದು ತಿಳಿಸಿದ ಕಾರಣ, ನನ್ನನ್ನು ಮತ್ತು ನನ್ನ ಅಣ್ಣ ಕುಮಾರಸ್ವಾಮಿಯನ್ನು ನಟರಾಜ ಮತ್ತು ವನಜಾಕ್ಷಿ ಸೇರಿ ಆ್ಯಂಬ್ಯುಲೆನ್ಸ್ ನಲ್ಲಿ ಮಣಿಪಾಲದ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಮಣಿಪಾಲದ ಆಸ್ಪತ್ರೆಗೆ ಹೋದಾಗ ಸಂಜೆ 6 ಗಂಟೆ ಆಗಿತ್ತು. ಅಲ್ಲಿ ವೈದ್ಯರು ನನ್ನ ಅಣ್ಣ ಕುಮಾರಸ್ವಾಮಿಯ ಸ್ಕ್ಯಾನಿಂಗ್ ಮಾಡಿ, ಕುಮಾರಸ್ವಾಮಿಗೆ ತೀವ್ರಸ್ವರೂಪದ ಗಾಯಗಳು ಆಗಿಹೋಗಿದೆ, ಚಿಕಿತ್ಸೆ ಕೊಡಲು ಆಗುವುದಿಲ್ಲ ಎಂದು ತಿಳಿಸಿ, ನನಗೆ ಎಕ್ಸ್‌ರೇ ಮಾಡಿ ಚಿಕಿತ್ಸೆ ನೀಡಿದ್ದಾರೆ. ಆ ನಂತರ ಆ್ಯಂಬ್ಯುಲೆನ್ಸ್ ನಲ್ಲಿ ಕುಮಾರಸ್ವಾಮಿಯನ್ನು ಉಡುಪಿಯ ಆದರ್ಶ ಆಸ್ಪತ್ರೆಗೆ ನಾನು, ನಟರಾಜ, ವನಜಾಕ್ಷಿ ಹಾಗೂ ಕುಮಾರಸ್ವಾಮಿಯ ಮಗ ಅಶೋಕ ಕರೆದುಕೊಂಡು ಹೋಗಿದ್ದೇವೆ. ಹೀಗೆ ಹೋದಾಗ ರಾತ್ರಿ 10 ಗಂಟೆ ಆಗಿತ್ತು. ಅಲ್ಲಿ ವೈದ್ಯರು ಕುಮಾರಸ್ವಾಮಿಯ ತಲೆ ಶಸ್ತ್ರಚಿಕಿತ್ಸೆ ಮಾಡಬೇಕು ಎಂದು ತಿಳಿಸಿದರು. ಕುಮಾರಸ್ವಾಮಿ ಧರಿಸಿದ್ದ ಬಟ್ಟೆಯನ್ನು ವೈದ್ಯರು ನನ್ನ ಕೈಗೆ ಕೊಟ್ಟು ಶಸ್ತ್ರಚಿಕಿತ್ಸೆ ಮಾಡಿದ್ದಾರೆ. ಆಗಲೂ ಕೂಡ ಕುಮಾರಸ್ವಾಮಿ ಮಾತನಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲ. ಪ್ರಜ್ಞೆತಪ್ಪಿದ ಸ್ಥಿತಿಯಲ್ಲೇ ಇದ್ದರು. 29 ನೇ ತಾರೀಖು ಮಧ್ಯಾಹ್ನ 2–2 ವರೆ ಗಂಟೆ ಸಮಯಕ್ಕೆ ನನ್ನ ಅಣ್ಣ ಕುಮಾರಸ್ವಾಮಿ ತೀರಿಕೊಂಡಿದ್ದಾರೆ. ಆನಂತರ ಆದರ್ಶ ಆಸ್ಪತ್ರೆಯ ವೈದ್ಯರು ಶವಪರೀಕ್ಷೆಗಾಗಿ ಉಡುಪಿಯ ಸಾರ್ವಜನಿಕ ಆಸ್ಪತ್ರೆಗೆ ದೇಹವನ್ನು ಕಳುಹಿಸಿಕೊಟ್ಟರು. ಅಲ್ಲಿಯ ಪೊಲೀಸರು ಹಾಸನ ಪೊಲೀಸರಿಗೆ ಮಾಹಿತಿ ನೀಡಿ,

ಹಾಸನದ ಗ್ರಾಮಾಂತರ ಪೊಲೀಸರು 30 ನೇ ತಾರೀಖು ಉಡುಪಿಗೆ ಬಂದು ಬೆಳಿಗ್ಗೆ 6 ರಿಂದ 9 ಗಂಟೆ ವರೆಗೆ ಉಡುಪಿಯ ಸಾರ್ವಜನಿಕ ಆಸ್ಪತ್ರೆಯ ಶವಾಗಾರದಲ್ಲಿ ಶವತನಿಖಾ ಕ್ರಮ ಜರುಗಿಸಿದ್ದಾರೆ. ಆ ಸಮಯ, ನಾನು, ಚಾಸಾ-6 ರಿಂದ 8 ಹಾಗೂ ಕುಮಾರಸ್ವಾಮಿಯ ಮಗ ಅಶೋಕ ಹಾಜರಿದ್ದೆವು.

ಆ ನಂತರ ಮೃತದೇಹವನ್ನು ಶವಪರೀಕ್ಷೆಗಾಗಿ ಮಣಿಪಾಲದ ಆಸ್ಪತ್ರೆಗೆ ಪೊಲೀಸರು ಕಳುಹಿಸಿಕೊಟ್ಟರು. ಅಲ್ಲಿ ಕುಮಾರಸ್ವಾಮಿಯವರ ಶವಪರೀಕ್ಷೆ ಯನ್ನು 12 ಗಂಟೆಗೆ ಮುಗಿಸಿ, ಮೃತದೇಹವನ್ನು ನಮಗೆ 2 ಗಂಟೆಗೆ ಕೊಟ್ಟರು. ಆ ನಂತರ ಮೃತದೇಹವನ್ನು ನಮ್ಮ ಗ್ರಾಮಕ್ಕೆ ತಂದು, ಅಂತಿಮಸಂಸ್ಕಾರ ಮಾಡಿದ್ದೇವೆ. ನನ್ನ ಅಣ್ಣ ಕುಮಾರಸ್ವಾಮಿ ಧರಿಸಿದ್ದ ರಕ್ತದ ಕಲೆಯಾಗಿದ್ದ ಬಟ್ಟೆಗಳನ್ನು ವೈದ್ಯರು ಸಂಗ್ರಹಿಸಿಕೊಟ್ಟಿದ್ದು ಅದನ್ನು ನನ್ನ ಬಳಿಯೇ ಇಟ್ಟುಕೊಂಡಿದ್ದೆ. ದಿಃ01-12-2016 ರಂದು ಪೊಲೀಸರು ಅದನ್ನು ತರುವಂತೆ ನನ್ನನ್ನು ಕೋರಿದ್ದು, ಆ ದಿನ ಸುಮಾರು 2 ಗಂಟೆ ಸಮಯಕ್ಕೆ ಪೊಲೀಸರ ಕಛೇರಿಗೆ ನಾನು ಹಾಜರಾಗಿ, ನನ್ನ ಜೊತೆ ಅಶೋಕ ಕೂಡ ಇದ್ದ, ಮೃತರ ವಸ್ತ್ರಗಳನ್ನು ಪೊಲೀಸರಿಗೆ ಹಾಜರುಪಡಿಸಿದ್ದೇನೆ. ಅದನ್ನು ಶಿವಕುಮಾರ್ ಎನ್ನುವ ಪೊಲೀಸ್ ಅಧಿಕಾರಿಯ ಬಳಿ ಹಾಜರುಪಡಿಸಿದ್ದೇನೆ. ಆ ಸಮಯ ನಾನು, ಚಾಸಾ-9, 16, 17 ಹಾಜರಿದ್ದೆವು. ನಾನು ಹಾಜರಿಸಿದ ಬಟ್ಟೆಗಳನ್ನು ಮಹಜರ್ ಬರೆದು ಅದನ್ನು ಬಿಳಿ ಬಟ್ಟೆಯಲ್ಲಿ ಇಟ್ಟು ಸೀಲುಮಾಡಿ ಸ್ವಾಧೀನಪಡಿಸಿಕೊಂಡರು. ಮಧ್ಯಾಹ್ನ 3-15 ರಿಂದ 4-15 ರವರೆಗೆ ಆ ಮಹಜರ್ ಬರೆದಿದ್ದಾರೆ. ಪೊಲೀಸರು ಆ ಮಹಜರನ್ನು ನನಗೆ ಓದಿ ಹೇಳಿ ನನ್ನ ಸಹಿಯನ್ನು ಪಡೆದುಕೊಂಡರು. ಮಹಜರನ್ನು ನೋಡುತ್ತಿದ್ದು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂಬುದಾಗಿ ಗುರುತಿಸಲಾಯಿತು. ರಕ್ತದ ಕಲೆ ಇರುವ ಬಿಳಿ ಕೆಂಪು ಗೆರೆಗಳಿರುವ ಕಂದುಬಣ್ಣದ ಶರ್ಟ್ ಹಾಜರುಪಡಿಸಿದ್ದೇನೆ. (ನ್ಯಾಯಾಲಯದ ಮುಂದೆ ಸೀಲಾಗಿರುವ ಕವರನ್ನು ತೆರೆಯಲು ಅನುಮತಿಸಲಾಗಿದೆ). ನಾನು ಆ ಶರ್ಟನ್ನು ಗುರುತಿಸುತ್ತಿದ್ದೇನೆ. ಈಗ ನೋಡುತ್ತಿರುವ ಶರ್ಟ್ ನಾನು

ಹಾಜರಿಸಿದ ಶರ್ಟ್ ಆಗಿದೆ, ಅದನ್ನು ಎಂ.ಒ–1 ಎಂದು ಗುರುತಿಸಲಾಯಿತು. ರಕ್ತದ ಕಲೆ ಆಗಿದ್ದ ನನ್ನ ಅಣ್ಣ ಧರಿಸಿದ್ದ ಬನಿಯನ್ ಕೂಡ ಹಾಜರುಪಡಿಸಿದ್ದೆ. (ನ್ಯಾಯಾಲಯದ ಮುಂದೆ ಸೀಲಾಗಿರುವ ಕವರನ್ನು ತೆರೆಯಲು ಅನುಮತಿಸಲಾಗಿದೆ).ಈಗ ತೋರಿಸಿದ ಬನಿಯನ್ ನ್ನು ಗುರುತಿಸಿದ್ದು ಅದನ್ನು ಎಂ.ಒ–2 ಎಂದು ಸಾಕ್ಷಿದಾರರು ಗುರುತಿಸಿದ್ದಾರೆ. ರಕ್ತದ ಕಲೆ ಆಗಿದ್ದ ಬಿಳಿ–ಕಪ್ಪು ಅಡ್ಡಪಟ್ಟಿಯ ಸ್ವೆಟರ್ ಹಾಜರುಪಡಿಸಿದ್ದೇನೆ. (ನ್ಯಾಯಾಲಯದ ಮುಂದೆ ಸೀಲಾಗಿರುವ ಕವರನ್ನು ತೆರೆಯಲು ಅನುಮತಿಸಲಾಗಿದೆ). ಈಗ ತೋರಿಸಿದ ಸ್ವೆಟರ್ ನ್ನು ಗುರುತಿಸಿದ್ದು ಅದನ್ನು ಎಂ.ಒ–3 ಎಂದು ಸಾಕ್ಷಿದಾರರು ಗುರುತಿಸಿದ್ದಾರೆ. ರಕ್ತದ ಕಲೆ ಅಗಿದ್ದ ಕಪ್ಪು ಬಣ್ಣದ ಪ್ಯಾಂಟನ್ನು ಹಾಜರುಪಡಿಸಿದ್ದೇನೆ. (ನ್ಯಾಯಾಲಯದ ಮುಂದೆ ಸೀಲಾಗಿರುವ ಕವರನ್ನು ತೆರೆಯಲು ಅನುಮತಿಸಲಾಗಿದೆ). ಈಗ ತೋರಿಸಿದ ಕಪ್ಪುಬಣ್ಣದ ಪ್ಯಾಂಟನ್ನು ಗುರುತಿಸಿದ್ದು ಅದನ್ನು ಎಂ.ಒ–4 ಎಂದು ಸಾಕ್ಷಿದಾರರು ಗುರುತಿಸಿದ್ದಾರೆ. ನನ್ನ ಅಣ್ಣ ಧರಿಸಿದ್ದ ರಕ್ತದ ಕಲೆ ಆಗಿದ್ದ ಟವೆಲ್ ಕೂಡ ಹಾಜರುಪಡಿಸಿದ್ದೇನೆ. (ನ್ಯಾಯಾಲಯದ ಮುಂದೆ ಸೀಲಾಗಿರುವ ಕವರನ್ನು ತೆರೆಯಲು ಅನುಮತಿಸಲಾಗಿದೆ). ಈಗ ತೋರಿಸಿದ ರಕ್ತದ ಕಲೆ ಆಗಿದ್ದ ಟವೆಲ್ ನ್ನು ಗುರುತಿಸಿದ್ದು ಅದನ್ನು ಎಂ.ಒ–5 ಎಂದು ಸಾಕ್ಷಿದಾರರು ಗುರುತಿಸಿದ್ದಾರೆ. ನನ್ನ ಅಣ್ಣ ಧರಿಸಿದ್ದ ಒಳಚಡ್ಡಿ ಕೂಡ ಹಾಜರುಪಡಿಸಿದ್ದೇನೆ. (ನ್ಯಾಯಾಲಯದ ಮುಂದೆ ಸೀಲಾಗಿರುವ ಕವರನ್ನು ತೆರೆಯಲು ಅನುಮತಿಸಲಾಗಿದೆ). ಈಗ ತೋರಿಸಿದ ಒಳಚಡ್ಡಿಯನ್ನು ಗುರುತಿಸಿದ್ದು ಅದನ್ನು ಎಂ.ಒ–6 ಎಂದು ಸಾಕ್ಷಿದಾರರು ಗುರುತಿಸಿದ್ದಾರೆ.

ಆನಂತರ ತನಿಖಾಧಿಕಾರಿಗಳು ನನ್ನ ಅಣ್ಣ ಕೊಲೆಯಾದ ಸ್ಥಳವನ್ನು ತೋರಿಸಲು ಕೇಳಿಕೊಂಡರು. ಆನಂತರ ನಾನು ಪೊಲೀಸರನ್ನು ಕೃತ್ಯನಡೆದ ಸ್ಥಳವಾದ ಸರ್ವೆ ನಂ:93 ರಲ್ಲಿರುವ ಸೈಟ್ ನಂ:57 ರ ಬಳಿಗೆ ಕರೆದುಕೊಂಡು ಹೋದೆ. ಅದು ಕಮಾರಸ್ವಾಮಿ ಮತ್ತು ವನಜಾಕ್ಷಿಯವರ ಸ್ವತ್ತು ಆಗಿದೆ. ಅಲ್ಲಿ ಚಾಸಾ–12 ಮತ್ತು 13 ಫಾಲಚಂದ್ರ ಮತ್ತು ವಿರೂಪಾಕ್ಷರವರನ್ನು ಪೊಲೀಸರು

ಪಂಚರಾಗಿ ಕರೆಸಿದ್ದಾರೆ. ಅಲ್ಲಿ ಪೊಲೀಸರು ಸ್ಥಳವನ್ನು ಅಜಮಾಯಿಸಿ, ರಕ್ತದ ಕಲೆ ಬಿದ್ದಿದ್ದ ಸ್ಥಳದಿಂದ ರಕ್ತದ ಕಲೆ ಆಗಿದ್ದ ಮಣ್ಣನ್ನು ಸಂಗ್ರಹಿಸಿದರು. ಅದನ್ನು ಕೆ ಎನ್ನುವ ಅಕ್ಷರದಿಂದ ಸೀಲುಮಾಡಿ ಸ್ವಾಧೀನಪಡಿಸಿಕೊಂಡರು. ಅದೇ ರೀತಿ ಸಾದಾ ಮಣ್ಣನ್ನು ಕೂಡ ಸಂಗ್ರಹಿಸಿದ್ದಾರೆ. ಅವುಗಳನ್ನು ನೋಡುತ್ತಿದ್ದು ಎಂ.ಒ–7 ಮತ್ತು ಎಂ.ಒ.8 ಎಂದು ಸಾಕ್ಷಿದಾರರು ಗುರುತಿಸಿದ್ದಾರೆ. ಎಂ.ಒ–7 ಮತ್ತು 8 ರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ನನ್ನ ಸಹಿ ಪಡೆದುಕೊಂಡರು. ಆ ಮಹಜರನ್ನು ಸಂಜೆ 5 ರಿಂದ 6 ಗಂಟೆವರೆಗೆ ಮಾಡಿ ಅದನ್ನು ಓದಿ ಹೇಳಿ ಆ ದಾಖಲೆಗೆ ನನ್ನ ಹಾಗೂ ಚಾಸಾ–12, 13 ರವರ ಸಹಿ ಪಡೆದಿದ್ದಾರೆ. ಆ ಮಹಜರನ್ನು ನೋಡುತ್ತಿದ್ದು ನಿಪಿ–3 ಎಂದು, ಸಾಕ್ಷಿ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ಆ ಸ್ಥಳದಲ್ಲಿ ಪೊಲೀಸರು ಒಂದು ನಕಾಶೆಯನ್ನು ಸಹ ತಯಾರಿಸಿ ಮಹಜರ್ ನಲ್ಲಿ ನಮೂದಿಸಿದ್ದಾರೆ. ನನ್ನ ಅಣ್ಣನಿಗೆ ಮತ್ತು ನನಗೆ ಆರೋಪಿಗಳು ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಕ್ರಮವಾಗಿ ಎಂಒ–9 ರಿಂದ 12 ಎಂದು ಗುರುತಿಸಲಾಯಿತು. ಆರೋಪಿಗಳೆಲ್ಲರೂ ಸೇರಿ, ನನ್ನ ಅಣ್ಣ ಕುಮಾರಸ್ವಾಮಿಯನ್ನು ಕೊಲೆ ಮಾಡಿರುತ್ತಾರೆ. ಮಲ್ಲಿಕಾರ್ಜುನ, ಪ್ರಭಯ್ಯನಿಂದ ಖರೀದಿಸಿದ ಸೈಟ್ ನಂಃ56 ಆಗಿದ್ದು ಅದು 57 ರ ಪಕ್ಕದ ಸೈಟ್ ಆಗಿತ್ತು. 57 ನೇ ನಂಬರ್ ಸೈಟನ್ನು ಪ್ರಭಯ್ಯ 1 ನೇ ಆರೋಪಿಗೆ ಮಾರಿರಲಿಲ್ಲ. ಗಲಾಟೆ ಆಗುತ್ತಿದ್ದಾಗ ನಾನು ಮತ್ತು ನನ್ನ ಅಣ್ಣ ಹಾಗೂ ಆರೋಪಿಗಳನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಅಲ್ಲಿ ಹತ್ತಿರದಲ್ಲಿ ಯಾವುದೇ ಮನೆಗಳು ಇರುವುದಿಲ್ಲ, ಸ್ವಲ್ಪ ದೂರದಲ್ಲಿ ಇವೆ. ಪೊಲೀಸರು 1–12–2016 ರಂದು ನನ್ನ ಮುಂದುವರೆದ ಹೇಳಿಕೆಯನ್ನು ಕೂಡ ಪಡೆದುಕೊಂಡಿದ್ದಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

(ವಕೀಲರ ಕೋರಿಕೆ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು)

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2 ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.